ಓ... ಇನ್ನೂ ನಾಲ್ಕೂ ಮುಕ್ಕಾಲು! ಶಂಕರ ಬರೋಕ್ಕೆ ಇನ್ನೂ ಒಂದೂ ಕಾಲು ಗಂಟೆ ಸಮಯವಿದೆ. 'ಮುಂಜಿ ನಿಲ್ಲಿಸೋದು ಬೇಡ. ಇದಾಗಲೇ ಬೇರೆ ಬೇರೆ ಕಾರಣಕ್ಕೆ ಎರಡು ಸಲ ನಿಂತಿದೆ. ಈ ಸಲ ಹಾಗಾಗೋದು ಬೇಡ. ನಿಮ್ಮ ಪಾಡಿಗೆ ನೀವೆಲ್ಲಾ ಮುಂಜಿ ಮಾಡಿ. ನಾನೊಬ್ಬಳು ಅಪ್ಪನ್ನ ನೋಡ್ಕೊಂಡು ಆಸ್ಪತ್ರೇಲಿ ಇರ್ತೀನಿ' ಅಂತ ಹೇಳಿದರೆ ಜನಾರ್ದನ ಕೇಳಲಿಲ್ಲ. 'ಮುಂಜಿಗೆ ಏನೂ ಅವಸರವಿಲ್ಲ. ಅಪ್ಪ ಗುಣ ಆದ ಮೇಲೆ ಮಾಡೋಣ. ನೀನೂ ಅಪ್ಪ ಇಲ್ಲದೆ ಯಾವ ಸಂಭ್ರಮ? ಸಾಲದ್ದಕ್ಕೆ ಜನ ಏನಂತಾರೆ?' ಅಂದ. ಛತ್ರಕ್ಕೆ ಕೊಟ್ಟ ಅಡ್ವಾನ್ಸ್ ಹಣ ನಿನ್ನೆ ದಿನ ವಾಪಸ್ ತೊಗೊಂಡನಂತೆ. ಯಾಕೆ ಹಾಗೆ ಮಾಡಿದನೋ?.. ಪುನೀತನಿಗೆ ಗುರುಬಲ ಬಂದಾಗ ಮಾಡಬೇಕು ಅಲ್ಲವ? ಸಾಲದ್ದಕ್ಕೆ ಮುಂಜಿಗೆ ಅಂತ ಎಲ್ಲರಿಗೂ ಬಟ್ಟೆಬರೆ, ಉಡುಗೊರೆ ಎಲ್ಲಾ ಅದಾಗಲೇ ತಂದಿದ್ದರು! ಮಾಲತಿ, ಗಿರಿಧರ, ಪಲ್ಲವಿ, ಹುಡುಗರು ಎಲ್ಲಾ ಖುಷಿಯಾಗಿದ್ದರು! ಇವರಿಗೆ ಹೀಗಾಯ್ತು! ಎಲ್ಲರೂ ಪೆಚ್ಚು ಮೋರೆ ಹಾಕಿಕೊಂಡು ಕೂತರು. ಇವರು ಒಂದು ವಾರದಲ್ಲಿ ಗುಣವಾಗಿಬಿಡಬಹುದು. ಮುಂಜಿ ನಿಲ್ಲಿಸುವ ಅಗತ್ಯವಿಲ್ಲ ಅಂತಲೇ ಮೊದಲು ಎಲ್ಲರೂ ಅಂದುಕೊಂಡಿದ್ದು. ಆದರೆ, ಈಗ ಡಾಕ್ಟರು ಇನ್ನು ಆರು ವಾರಗಳು ಆಗಬಹುದು ಅಂದಿದ್ದಾರೆ! ಸಾಲದ್ದಕ್ಕೆ, 'ಅವರಿಗೊಂದು ಮಿದುಳಿನ ಸರ್ಜರಿ ಆಗಬೇಕು. ಇಪ್ಪತ್ತು ಲಕ್ಷ ರೂಪಾಯಿ ಖರ್ಚಾಗುತ್ತೆ. ನೀವು ಎಷ್ಟು ಬೇಗ ಹಣ ಹೊಂದಿಸ್ತೀರೋ, ಅಷ್ಟು ಬೇಗ ಆಪರೇಷನ್' ಅಂತ ಬೇರೆ ಹೇಳಿದ್ದಾರೆ. ಜನಾರ್ದನನಿಗೂ, ಗಿರಿಧರನಿಗೂ ಅಷ್ಟು ಹಣ ಹೇಗೆ ಹೊಂದಿಸೋದು ಅಂತಲೇ ಚಿಂತೆಯಾಗಿದೆ! ಇನ್ನೆಲ್ಲಿಯ ಮುಂಜಿ? ಪಾಪ... ಆ ಹುಡುಗನ ಮುಖ ನೋಡೋಕ್ಕಾಗಲ್ಲ! ಜೊತೆಯ

